**CC 5125/2023**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ಹೊಸಪೇಟೆ.**
**ಸಿಸಿ ನಂಬರ್ 5125/2023**

**ಸಿ ಡಬ್ಲ್ಯೂ 12**
**ಪಿ ಡಬ್ಲ್ಯೂಃ 6**

**ಸಾಕ್ಷಿಯ ಹೆಸರು - ಮಾರುತಿ**
**ತಂದೆಯ ಹೆಸರು - ಯಲ್ಲಪ್ಪ ಭಜಂತ್ರಿ**
**ವಯಸ್ಸು - 32 ವರ್ಷಗಳು**
**ಉದ್ಯೋಗ - ಪೇದೆ, ಹಂಪಿ ಪ್ರವಾಸಿ ಪೋ.ಠಾ.**
**ವಾಸಸ್ಥಳ - ಕಮಲಾಪುರ**

**ಸಾಕ್ಷಿಯನ್ನು ದಿನಾಂಕಃ 22-08-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು ದಿಃ **03-07-2022** ರಿಂದ ಇಲ್ಲಿಯವರೆಗೆ ಹಂಪಿ ಪ್ರವಾಸಿ ಪೋಲಿಸ್ ಠಾಣೆಯಲ್ಲಿ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ **24-06-2023** ರಂದು ಬೆಳಿಗ್ಗೆ **08.00** ಗಂಟೆಗೆ ಚಾಸಾ **-1** ರವರು ನನ್ನನ್ನು ಮತ್ತು ಇತರೆ ಸಿಬ್ಬಂದಿಗಳನ್ನು ಕಡ್ಡಿರಾಂಪೂರ ಗ್ರಾಮದ ಉದ್ದಾನಪ್ಪನ ಬೆಲ್ಲದ ಗಾಣದ ಹತ್ತಿರ ಸಾರ್ವಜನಿಕ ಕಚ್ಚಾ ರಸ್ತೆಯ ಹತ್ತಿರ ಕರೆದುಕೊಂಡು ಹೋಗಿದ್ದರು. ನಾವು ಹರಿಜನ ನಾರಾಯಣಪ್ಪನ ಬಾಳೆ ತೋಟದಲ್ಲಿ ಬೆಳಿಗ್ಗೆ **08.30** ಗಂಟೆಗೆ ಅಡಗಿ ಕುಳಿತು ಸ್ಥಳವನ್ನು ವೀಕ್ಷಿಸುತ್ತಿದ್ದೇವು. ಸದರಿ ಸ್ಥಳಕ್ಕೆ ಇಬ್ಬರು ಹುಡುಗರು ಬಂದರು. ಸದರಿ ಜೇಬುಗಳಲ್ಲಿ **2** ಕವರ್ ಗಳು ಇದ್ದವು. ಅವರು ಅವುಗಳನ್ನು ತೆಗೆದು ನೋಡುತ್ತಿದ್ದರು. ಬೆಳಿಗ್ಗೆ **08.45** ಗಂಟೆಗೆ ನಾವುಗಳು ದಾಳಿ ಮಾಡಿ ಸದರಿಯವರನ್ನು ಹಿಡಿಯಲು ಹೋದೆವು. ಅವರು ಓಡಿ ಹೋದಾಗ ನಾವು ಬೆನ್ನಟ್ಟಿ ಹಿಡಿದಿರುತ್ತೇವೆ. ಚಾಸಾ **-1** ರವರು ಪಂಚರ ಸಮಕ್ಷಮ ಮತ್ತು ಅಧಿಕಾರಿಗಳ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತಾರೆ.

ತೂಕದ ಯಂತ್ರದಲ್ಲಿ ಗಾಂಜಾವನ್ನು ತೂಕ ಮಾಡಿ ನೋಡಿರುತ್ತಾರೆ. ಲ್ಯಾಪಟಾಪ್ ನಲ್ಲಿ ತನಿಖಾಧಿಕಾರಿ ಪಂಚನಾಮೆಯನ್ನು ಟೈಪ್ ಮಾಡಿ, ಠಾಣೆಗೆ ಹಿಂತಿರುಗಿ ಪ್ರಿಂಟ್ ತೆಗೆದು ಎಲ್ಲರ ಸಹಿ ಮಾಡಿಸಿರುತ್ತಾರೆ. ನಾವು ಠಾಣೆಗೆ ಹೋದಾಗ ಮಧ್ಯಾಹ್ನ **12.00** ಗಂಟೆ ಆಗಿತ್ತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿಃ **2** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **2(ಎಫ್)** ಎಂದು ಗುರುತಿಸಲಾಯಿತು.

ಗಾಂಜಾ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಮು ಮಾ **1** ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನಿಪಿಃ **4** ರ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಟಿ ಎಲ್ ಎಸ್ ಕೆ., ವಕೀಲರಿಂದ</u>**

ನಾನು ಅಪರಾಧ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ನನಗೆ ಕರ್ತವ್ಯದ ಅವಧಿಗಳು ಇರಲಿಲ್ಲ. ನಾನು ಬೆಳಿಗ್ಗೆ **2** ಬಾರಿ ಮತ್ತು ಸಂಜೆ **1** ಬಾರಿ ಬೀಟ್ ಕರ್ತವ್ಯ ಮಾಡುತ್ತಿದ್ದೆ. ನಾನು ಗುನ್ನಾ ಸ್ಥಳಕ್ಕೆ ದ್ವಿ ಚಕ್ರ ವಾಹನದಲ್ಲಿ ಹೋಗಿರುತ್ತೇನೆ. ನಾನು ಗುನ್ನಾ ಸ್ಥಳಕ್ಕೆ ಹೋಗಿದ್ದ ವಾಹನದ ಸಂಖ್ಯೆ ನನಗೆ ಗೊತ್ತಿಲ್ಲ. ಸ್ಥಳಕ್ಕೆ ಒಂದು ಸರ್ಕಾರಿ ಜೀಪ್ ನಲ್ಲಿ ಮತ್ತು **4** ಖಾಸಗಿ ದ್ವಿ ಚಕ್ರ ವಾಹನಗಳಲ್ಲಿ ಹೋಗಿದ್ದೇವು. ಸ್ಥಳಕ್ಕೆ ಹೋದಾಗ ಪಂಚರ ಸಮಕ್ಷಮ ನಮ್ಮ ಅಂಗಶೋಧನೆಯನ್ನು ಮಾಡಿಕೊಂಡಿಲ್ಲ. ನಾವುಗಳು ನಿಂತಿದ್ದೇವು ಎನ್ನಲಾದ ತೋಟದ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಉದ್ದಾನಪ್ಪನ ಗಾಣ ಇದ್ದ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಠಾಣೆಯಿಂದ ಗುನ್ನಾ ಸ್ಥಳ ಮೂರುವರೆ ಕಿ ಮೀ ಅಂತರದಲ್ಲಿ ಇರುತ್ತದೆ. ನಾವು ಠಾಣೆಯನ್ನು ಬಿಟ್ಟಾಗ **08.00** ಗಂಟೆ ಆಗಿತ್ತು, ಸ್ಥಳ ತಲುಪಿದಾಗ **08.30** ಗಂಟೆ ಆಗಿತ್ತು.

**CC 5125/2023**

**ಸಿ ಡಬ್ಲೂ 12**

**ಪಿ ಡಬ್ಲೂ: 6**

ಆರೋಪಿತರನ್ನು ನಾನು ಮತ್ತು ಚಾಸಾ -10 ರವರು ಹಿಡಿದಿದ್ದರು. ನಾನು 1 ನೇ ಆರೋಪಿಯನ್ನು ಮತ್ತು ಚಾಸಾ -10 2 ನೇ ಆರೋಪಿಯನ್ನು ಹಿಡಿದಿದ್ದೇವು. ನನ್ನ ಹೇಳಿಕೆಯಲ್ಲಿ ನಾನು 1 ನೇ ಆರೋಪಿಯನ್ನು ಹಿಡಿದಿದ್ದೆ ಮತ್ತು ಚಾಸಾ -10 ರವರು 2 ನೇ ಆರೋಪಿಯನ್ನು ಹಿಡಿದಿದ್ದರು ಎಂದು ಹೇಳಿ ಬರೆಸಿಲ್ಲ ಅಂದರೆ ಸರಿ. ನಾವುಗಳು ದಾಳಿ ಮಾಡುವ ಉದ್ದೇಶದಿಂದ ಯಾವುದೇ ಸ್ಥಳಕ್ಕೆ ಹೋಗಿರಲಿಲ್ಲ ಅಂದರೆ ಸರಿಯಲ್ಲ. ಆರೋಪಿತರು ಯಾವುದೇ ಗಾಂಜಾ ಮಾರಾಟ ಮಾಡುತ್ತಿರಲಿಲ್ಲ ಮತ್ತು ಅವರ ತಾಬಾದಿಂದ ಗಾಂಜಾ ಜಪ್ತು ಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ಮು ಮಾ ವನ್ನು ಪ್ರಕರಣದಲ್ಲಿ ನಾವೇ ಸೇರಿಸಿರುತ್ತೇವೆ ಅಂದರೆ ಸರಿಯಲ್ಲ. 1 ನೇ ಆರೋಪಿಯ ಅಜ್ಜ ರಾಜಕೀಯವಾಗಿ ಪ್ರಭಾವಿ ಇರುತ್ತಾರೆ ಅಂದರೆ ಸರಿ. ಸದರಿಯವರ ರಾಜಕೀಯ ವೈಶಮ ಹೊಂದಿರುವವರ ಮಾತು ಕೇಳಿ ನನ್ನ ಮೇಲಾಧಿಕಾರಿ ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಅಂದರೆ ಸರಿಯಲ್ಲ. ಯಾವುದೇ ಪಂಚನಾಮೆ ಆಗದಿದ್ದರೂ, ಅಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮು ಮಾ ಗೂ, ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆ- ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.